ಅಜೇಯ

# ನೀರು ಅಮೃತ-ಅತಿಯಾದರೆ ಅಮೃತವೂ ವಿಷ!!

ನೀರು ಜೀವನ ತರ್ಪಣ, ಹೃದಯಕ್ಕೆ ಹಿತ, ಮನಸ್ಸಿಗೆ ಆನಂದವನ್ನುಂಟು ಮಾಡುತ್ತದೆ. ಬುದ್ಧಿಪಾಟವವನ್ನು ಉಂಟುಮಾಡುತ್ತದೆ. ತಿಳಿಯಾಗಿರುತ್ತದೆ. ಬಣ್ಣವಿಲ್ಲ, ರುಚಿಯಿಲ್ಲ, ಇಂದ್ರಿಯಗಳಿಗೆ ಹಿತಕರ, ಮನಸ್ಸಿಗೆ ಉಲ್ಲಾಸಕರ. ತಂಪಾಗಿರುವ ಕಾರಣ ಶರೀರದ ಉಷ್ಣತೆಯನ್ನು ತಗ್ಗಿಸಬಲ್ಲದು. ಅಮೃತ ಸಮಾನ. ಪ್ರಾಣಧಾರಕ, ವಿಷಹರ, ನೀರಿನ ಬಗ್ಗೆ ಆಯುರ್ವೇದ ಗ್ರಂಥಗಳಲ್ಲಿ ಸಿಗುವ ಗುಣಗಳು.

ಎಲ್ಲ ರೀತಿಯ ನೀರಿಗೆ ಮುಖ್ಯ ಸ್ರೋತ ಮಳೆ ನೀರು. ಅದನ್ನು, ಗಂಗಾಂಬು, ಮಾಹೇಂದ್ರ ಜಲ ಅಥವಾ ಐಂದ್ರಾಂಬುವೆನ್ನಲಾಗಿದೆ. ಇದೇ ನೀರು ಭೂಮಿಯ ಮೇಲೆ ಬಿದ್ದ ನಂತರ ಆಯಾ ಸ್ಥಾನ ವಿಶೇಷಕ್ಕೆ ಅನುಗುಣವಾಗಿ ನದಿ, ಬಾವಿ, ಸರಸ್ಸು, ತಡಾಗ, ಕೆರೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಭೂಮಿಯ ಮೇಲಿನ ನೀರನ್ನು 8 ಹೆಸರುಗಳಿಂದ ಕರೆಯಲಾಗಿದೆ. ಕೌಪ-ಭಾವಿಯ ನೀರು, ಸಾರಸ-ಪ್ರಕೃತಿ ನಿರ್ಮಿತ ಸರೋವರಗಳು, ತಡಾಗ-ಮನುಷ್ಯ ನಿರ್ಮಿತ ಸರೋವರ, ಚೌಂಡ್ಯ-ಕಲ್ಲಿನ ಅಡಿಯಿರುವ ನೀರು, ಪ್ರಸ್ರವಣ-ಪರ್ವತದಿಂದ ಹರಿದು ಬರುವ ಝರಿಗಳು, ಔದ್ಭಿದ- ನೆಲದಿಂದ ಏಳುವ ಬುಗ್ಗೆಗಳು, ವಾಪಿ -ಮನುಷ್ಯರು ಇಳಿಯುವಂತಹ ಬಾವಿ ಮತ್ತು




ನದಿ-ಹೊಳೆಯ ನೀರು.

ಹಿಂದೆಲ್ಲಾ ಜಲ ಪರೀಕ್ಷೆಗೆ ನಾನಾ ಬಗೆಗಳಿತ್ತು- ಬಳಸಲು ಯೋಗ್ಯ ನೀರನ್ನು ಪರೀಕ್ಷಿಸುವ ವಿಧಾನ. ಪರೀಕ್ಷಿಸುತ್ತಿರುವ ನೀರನ್ನು ಬೆಳ್ಳಿ ಪಾತ್ರೆಯಲ್ಲಿ ಹಾಕಬೇಕು. ಅದಕ್ಕೆ ಬೆಂದ ಷಷ್ಟಿಕ ಶಾಲಿ- ಅನ್ನದ ಹೆಂಟೆಯನ್ನು ಹಾಕಿ 48 ನಿಮಿಷ ಕಾಯಬೇಕು. ನೀರಿನಲ್ಲಿ ಬಣ್ಣ ಅಥವಾ ಕ್ಲಿನ್ನತೆ ಕಾಣದಿದ್ದ ಪಕ್ಷದಲ್ಲಿ ಉಪಯೋಗಿಸಲು ಅಡ್ಡಿ ಇಲ್ಲ.

ನೀರಿನಲ್ಲಿ ಕೆಸರು, ಪಾಚಿ, ಜಲಕುಂಭಿ, ಹುಲ್ಲು , ತಾವರೆ ಎಲೆ ಮೊದಲಾದವುಗಳಿಂದ ಮುಚ್ಚಲ್ಪಟ್ಟು ಸೂರ್ಯ ಚಂದ್ರ ಕಿರಣ ಸೋಕದಿರುವ, ಗಂಧ, ವರ್ಣ, ರಸಗಳಿರುವ ನೀರನ್ನು ಉಪಯೋಗಿಸಬಾರದು. ಅದಕ್ಕೆ 6 ದೋಷವಿದೆ. ಈ ಎಲ್ಲಾ ದೋಷಗಳನ್ನು ನಿವಾರಿಸಲು 7 ರೀತಿಯ ವಿಧಾನಗಳುಂಟು. ಅದಕ್ಕೆ ಬಳಸುವ



ಸಾಧನಗಳು, ಕತಕದ ಬೀಜ, ಗೋಮೇದಕ, ಬಿಸಗ್ರಂಥಿ, ಪಾಚಿ, ಮುತ್ತು, ಸ್ಫಟಿಕಮಣಿ ಮತ್ತು ದಪ್ಪ ಬಟ್ಟೆ.

ವಿವಿಧ ದಿಕ್ಕುಗಳಿಗೆ ಹರಿಯುವ ನದಿಗಳ ನೀರಿನ ಗುಣಗಳನ್ನು ವಿವರಿಸಿದ್ದಾರೆ. ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ಹರಿಯುವ ನದಿಗಳ ನೀರು ಪಥ್ಯ. ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಅಪಥ್ಯ. ಸಹ್ಯಾದ್ರಿಯಲ್ಲಿ ಹುಟ್ಟುವ ನದಿಗಳು ಚರ್ಮರೋಗಕಾರಿ. ವಿಂಧ್ಯದಲ್ಲಿ ಹುಟ್ಟುವವು ಚರ್ಮರೋಗ ಮತ್ತು ಪಾಂಡು ರೋಗವನ್ನುಂಟು ಮಾಡುತ್ತವೆ. ಮಲಯ ಪರ್ವತದಲ್ಲಿ ಹರಿಯುವುದು ಕ್ರಿಮಿಯನ್ನು, ಮಾಹೇಂದ್ರ ಪರ್ವತದಲ್ಲಿ ಹುಟ್ಟುವವು ಶ್ಲೀಪದ ಮತ್ತು ಜಲೋದರವನ್ನೂ, ಹಿಮಾಲಯದಲ್ಲಿ ಹುಟ್ಟುವವು ಹೃದ್ರೋಗ, ಆನೆಕಾಲು ರೋಗ, ಗಳಗಂಡ ಮುಂತಾದವನ್ನೂ, ಪ್ರಾಚಿ, ಅವಂತೀ ಮತ್ತು ಅಪರಾಂತ ದೇಶದ ನದಿಗಳು ಮೊಳೆರೋಗವನ್ನು ಉಂಟುಮಾಡುತ್ತವೆಂದು ಹೇಳಲಾಗಿದೆ. ಮೇಲ್ನೋಟಕ್ಕೆ ಇದು ತುಂಬಾ ಹಾಸ್ಯಾಸ್ಪದವಾಗಿ ಕಂಡರೂ ಇದರಲ್ಲಿ ಅಂದಿನ "Epidemiology' ಅಡಗಿದೆ. ಅಂದರೆ ಆ ಭೂ ಪ್ರದೇಶದಲ್ಲಿ ಇಂತಹ ರೋಗಗಳು ಸಾಮಾನ್ಯವಾಗಿ ಕಾಣಸಿಗುತ್ತಿದ್ದವು ಎಂದರ್ಥ.

ಇವತ್ತಿಗೆ ಈ ವಿಷಯಗಳು ಅ ಪ್ರಸ್ತುತ ಅನಿಸಿದರೂ, ನಮ್ಮ ಸಂಸ್ಕೃತಿಯಲ್ಲಿ ಇದರ ಬಳಕೆ ಇತ್ತು, ಸಂಹಿತೆಗಳಲ್ಲಿ ಉಲ್ಲೇಖಗಳಿವೆ. ಈ UV filter, RO filter ಯುಗದಲ್ಲಿ ಅನುಕೂಲದಷ್ಟೇ ತೊಂದರೆಗಳನ್ನು ಎದುರಿಸುತ್ತಿರುವುದು ಗೊತ್ತಿಲ್ಲದ ವಿಚಾರವೇನಲ್ಲ.

ಕೇವಲಂ ಸೌಷಧಂ ಪಕ್ವಮಾಮಮುಷ್ಣಂ ಹಿತಂ ಚ ತತ್।
ಸಮೀಕ್ಷ್ಯ ಮಾತ್ರಾಯ ಯುಕ್ತಮಮೃತಂ ವಿಷಮನ್ಯಥಾ॥
ಅಷ್ಟಾಂಗ ಹೃದಯ

ನೀರು ಪ್ರಕೃತಿಯಲ್ಲಿ ದೊರಕುವುದನ್ನು, ತಕ್ಕ ಔಷಧಿಗಳ ಜೊತೆ ಸೇರಿದ್ದು, ಕುದಿಸಿದ್ದು, ಹಸಿಯಾಗಿರುವುದು, ಬಿಸಿಯಾಗಿರುವುದು ಎಂದು ಐದು ತರದ್ದಾಗಿರುತ್ತದೆ. ಅವುಗಳಲ್ಲಿ ಬೇರೆ ಬೇರೆ ಅವಸ್ಥೆಗೆ ತಕ್ಕಂತೆ ಯೋಚಿಸಿ, ಆರಿಸಿ, ಯುಕ್ತಿಯಿಂದ ಪ್ರಮಾಣಕ್ಕನುಸಾರವಾಗಿದ್ದರೆ ನೀರು ಅಮೃತಕ್ಕೆ ಸಮ, ಮೈ-ಮನಸ್ಸುಗಳಿಗೆ ಆಪ್ಯಾಯಿಸುತ್ತದೆ. ಮಾತ್ರಾ ಪ್ರಮಾಣವಿಲ್ಲದೇ ಸೇವಿಸಿದರೆ ವಿಷದಂತೆ ಪ್ರಾಣಘಾತ ಮಾಡುತ್ತದೆ.